ಕರ್ನಾಟಕ ವಿಧಾನ ಸಭೆ

ಗುರುವಾರ 24ನೇ ಡಿಸೆಂಬರ್ 2009ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತ್ತು. ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು.

(11-00 AM)

1. ಪ್ರಶ್ನೋತ್ತರ :

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ಪ್ರಾರಂಭ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಜೆ. ನರಸಿಂಹಸ್ವಾಮಿಯವರೆ ತಾವು ಪ್ರಶ್ನೆಯನ್ನು ಕೇಳಿ.

ಸರಕಾರಿ ಆಸ್ಪತ್ರೆಗೆ ಅವಶ್ಯ ಸಿಬ್ಬಂದಿ ಮತ್ತು ಸಲಕರಣೆಗಳ ಸೌಲಭ್ಯ :

46 (180) ಶ್ರೀ ನರಸಿಂಹಸ್ವಾಮಿ ಜಿ. (ದೊಡ್ಡಬಳ್ಳಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ಟೌನ್‌ನಲ್ಲಿರುವ 30 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮಾಡಿದ್ದು, ಇದುವರೆಗೂ ಅವಶ್ಯ ವೈದ್ಯರು ಹಾಗೂ ಸಿಬ್ಬಂದಿಯನ್ನು ನೇಮಕ ಮಾಡದೆ ಇರುವುದು, ಸಲಕರಣೆಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಆಸ್ಪತ್ರೆಗೆ ಅವಶ್ಯ ವೈದ್ಯರು, ಸಿಬ್ಬಂದಿ ಮತ್ತು ಔಷಧಿ ಸಲಕರಣೆಗಳನ್ನು ಯಾವಾಗ ಮಂಜೂರು ಮಾಡಲಾಗುವುದು ಇದಕ್ಕೆ ಸರಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ದೊಡ್ಡಬಳ್ಳಾಪುರ ಸಾರ್ವಜನಿಕ ಆಸ್ಪತ್ರೆಯು 50 ಹಾಸಿಗೆಗಳ ಆಸ್ಪತ್ರೆಯಾಗಿದ್ದು, ಸದರಿ ಆಸ್ಪತ್ರೆಗೆ ವೈದ್ಯರು, ಸಿಬ್ಬಂದಿವರ್ಗ ಮತ್ತು ಸಲಕರಣೆಗಳನ್ನು ಒದಗಿಸಲಾಗಿದೆ.

ಆದಾಗ್ಯೂ, ಪ್ರಸ್ತುತ ಈ ಆಸ್ಪತ್ರೆಗೆ 5 ವೈದ್ಯಾಧಿಕಾರಿಗಳ ಹುದ್ದೆಗಳು. ಮಂಜೂರಾಗಿದ್ದು, 4 ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇತರೆ ಸಿಬ್ಬಂದಿಯಾದ ಕ್ಷೇತ್ರ ಶಿಕ್ಷಣಾಧಿಕಾರಿ, ಕಿರಿಯ ಪುರುಷ ಆರೋಗ್ಯ ಸಹಾಯಕ, ಶುಶ್ರೂಷಕಿ ಮತ್ತು ಬೆರಳಚ್ಚುಗಾರರು/ಗುಮಾಸ್ತರ ತಲಾ ಒಂದು ಹುದ್ದೆ ಖಾಲಿ ಇವೆ. ಇದಲ್ಲದೇ, ಗ್ರೂಪ್-ಡಿ ವೃಂದದಲ್ಲಿ 6 ಹುದ್ದೆಗಳು ಖಾಲಿ ಇವೆ.

ಆ) ಈ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಆದೇಶವಾಗಿದೆ. ಆಸ್ಪತ್ರೆಯ ಕಟ್ಟಡ ಕಾಮಗಾರಿಗೆ ಸೂಕ್ತ ಸ್ಥಳಾವಕಾಶ ಇರುವುದಿಲ್ಲ. ಮೇಲ್ದರ್ಜೆಗೇರಿಸಿರುವುದಕ್ಕೆ ಅನುಗುಣವಾಗಿ ಕಟ್ಟಡ ನಿರ್ಮಾಣ ಶೇಕಡ 60 ರಷ್ಟು ಪೂರ್ಣಗೊಂಡ ನಂತರ, ವೈದ್ಯರು, ಸಿಬ್ಬಂದಿ, ಔಷಧಿ ಮತ್ತು ಇತರೆ ಸೌಲಭ್ಯವನ್ನು ನೀಡಲು ಸದರಿ ಆಸ್ಪತ್ರೆಗೆ ಅರ್ಹತೆ ಬರುತ್ತದೆ.

ಪ್ರಸ್ತುತ ಇಲಾಖೆಯಲ್ಲಿ ಖಾಲಿ ಇರುವ 562 ವೈದ್ಯಾಧಿಕಾರಿ ಹುದ್ದೆಗಳನ್ನು ಹಾಗೂ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದಲ್ಲದೇ, ವಿಶೇಷ ನೇಮಕಾತಿ ಸಮಿತಿ ಮೂಲಕ 5.021 ಅರೆ ವೈದ್ಯಕೀಯ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ. ನೇಮಕಾತಿ ಪ್ರಕ್ರಿಯೆ ಮುಗಿದ ನಂತರ, ಆದ್ಯತೆ ಮೇರೆಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

ಶ್ರೀ ಜೆ. ನರಸಿಂಹಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ದೊಡ್ಡಬಳ್ಳಾಪುರದಲ್ಲಿ 30 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿ ಸುಮಾರು 2 ವರ್ಷಗಳು ಆಗಿದೆ. ಆದರೂ ಕೂಡ ನಮಗೆ ಸಾಕಷ್ಟು ವೈದ್ಯರು ಮತ್ತು ಸಿಬ್ಬಂದಿ ಇದುವರೆಗೂ ಒದಗಿಸಿರುವುದಿಲ್ಲ, ಯಾವಾಗ ಒದಗಿಸುತ್ತೀರಿ? ಈಗಾಗಲೇ ಮೇಲ್ದರ್ಜೆಗೇರಿಸಿರುವಂತಹ ಶ್ರೀನಿವಾಸಪುರಕ್ಕೆ ಸಿಬ್ಬಂದಿಯನ್ನು ಒದಗಿಸಿದ್ದೀರಿ. ನಮ್ಮ ದೊಡ್ಡಬಳ್ಳಾಪುರಕ್ಕೆ ಏತಕ್ಕಾಗಿ ಒದಗಿಸಬಾರದು, ಸಿಬ್ಬಂದಿಯನ್ನು ಯಾವಾಗ ಒದಗಿಸುತ್ತೀರಿ? ಮೇಲ್ದರ್ಜೆಗೆ

ಏರಿಸುವುದಕ್ಕೆ ಕಟ್ಟಡವು ಇಲ್ಲವೆಂದು ಹೇಳಿದ್ದೀರಿ. ಕಟ್ಟಡ ಇಲ್ಲದೆ ಇರುವಂತಹ ಶ್ರೀನಿವಾಸಪುರಕ್ಕೆ ಕೊಟ್ಟಿದ್ದೀರಿ ನಮಗೆ ಯಾವಾಗ ತಾವು ಸಿಬ್ಬಂದಿಯನ್ನು ಕೊಡುವುದಕ್ಕೆ, ಡಾಕ್ಟರ್‌ನ್ನು ನೇಮಕ ಮಾಡುವುದಕ್ಕೆ, ಔಷಧಿಯನ್ನು ಕೊಡುವುದಕ್ಕೆ ಅಡ್ಡಿ ಏನು ಎಂದು ಸನ್ಮಾನ್ಯ ಸಚಿವರಲ್ಲಿ ನಿಮ್ಮ ಮೂಲಕ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ದೊಡ್ಡಬಳ್ಳಾಪುರ ಸಾರ್ವಜನಿಕ ಆಸ್ಪತ್ರೆ 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ದಿನಾಂಕ: 25.1.2007ರಲ್ಲಿ ಮೇಲ್ದರ್ಜೆಗೇರಿಸಲಾಗಿದೆ. 50 ಹಾಸಿಗೆಗಳ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸ ಬೇಕಾದರೆ ಅದಕ್ಕಾಗಿ 7 ಎಕರೆ ಜಮೀನು ಬೇಕಾಗಿದೆ. 7 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ತಹಶೀಲ್ದಾರ್‌ರವರಿಗೆ ಹಾಗೂ ಜಿಲ್ಲಾಧಿಕಾರಿಯವರಿಗೂ ಸಹ ಪತ್ರವನ್ನು ಬರೆಯಲಾಗಿದೆ. ನಮಗೆ ಅವರು ಇನ್ನೂ ಭೂಮಿಯನ್ನು ಕೊಟ್ಟಿರುವುದಿಲ್ಲ. ಇವತ್ತು ದೊಡ್ಡಬಳ್ಳಾಪುರದಲ್ಲಿ 56 ಪೋಸ್ಟ್‌ಗಳು ಮಂಜೂರಾಗಿದ್ದು, ಅಲ್ಲಿ 45 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲಿ 11 ಹುದ್ದೆಗಳು ಖಾಲಿ ಇದೆ. ಖಾಲಿ ಇರುವ ಸುಮಾರು 562 ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇಮಕಾತಿ ಮಾಡುವ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪತ್ರವನ್ನು ಬರೆದಿದ್ದೇವೆ. ಆದಷ್ಟು ಬೇಗನೆ ನಮಗೆ 562 ವೈದ್ಯರ ನೇಮಕಾತಿ formality ಪೂರ್ಣವಾದ ನಂತರ ಹಂತಹಂತವಾಗಿ ಯಾರ್ಯಾರಿಗೆ ವೈದ್ಯರುಗಳು ಬೇಕಾಗಿದ್ದಾರೆ ಅವರಿಗೆ ಕೊಡುತ್ತೇವೆ. ನಂತರ Para-Medical Staff 5021 ಹುದ್ದೆಗಳನ್ನು ನೇಮಕಾತಿ ಮಾಡುವ ಸಂಬಂಧ ಲೋಕಸೇವಾ ಆಯೋಗಕ್ಕೆ ಪತ್ರವನ್ನು ಬರೆದಿದ್ದೇವೆ. ಅಲ್ಲಿಂದ ಬಂದ ನಂತರ ಹಂತಹಂತವಾಗಿ ಏನೇನು ಮಾಡಬೇಕೆಂಬುವುದರ ಬಗ್ಗೆ ಎಲ್ಲವನ್ನು ಮಾಡಿಕೊಡುತ್ತೇವೆ.

ಶ್ರೀ ಜೆ. ನರಸಿಂಹಸ್ವಾಮಿ : ಈಗಾಗಲೇ ಬಂಗಾರಪೇಟೆ ಮತ್ತು ಶ್ರೀನಿವಾಸಪುರದ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಅಲ್ಲಿಗೆ ನೀವು ಸಿಬ್ಬಂದಿಯನ್ನು ಒದಗಿಸಿದ್ದೀರಿ, ಡಾಕ್ಟರ್‌ನ್ನು ಕೊಟ್ಟಿದ್ದೀರಿ, ಔಷಧಿಯನ್ನು ಒದಗಿಸಿದ್ದೀರಿ. ಜಮೀನು ಇಲ್ಲದಿರುವ ಬಗ್ಗೆ acquisition ಆಗಲಿ. ಕಾಮಗಾರಿ 60% ಆಗುವವರೆಗೂ ಏನು ಮಾಡುವುದು? ನಾನು ತಮ್ಮಲ್ಲಿ ಕೇಳುವುದೇನೆಂದರೆ, ನಮ್ಮ ತಾಲ್ಲೂಕಿಗೂ ಕೂಡ ಸಾಧ್ಯವಾದಷ್ಟು ಬೇಗನೆ ಜಿಲ್ಲಾಧಿಕಾರಿಯವರಿಗೆ ಹೇಳಿ, ಅವರು ಗುತ್ತಿಗೆಯ ಆಧಾರದ ಮೇಲೆ

ಡಾಕ್ಟರ್ಸ್‌ನ್ನು ಕೊಡಲಿ. ಕೇವಲ 4 ಜನ ಡಾಕ್ಟರ್‌ಗಳು ಇದ್ದಾರೆ. ದಿವಸಕ್ಕೆ ಆ ಆಸ್ಪತ್ರೆಗೆ 700 ಜನ Out-Patients ಬರುತ್ತಾರೆ. ನೀವು ಶ್ರೀಘ್ರವಾಗಿ ಮಾಡಿಕೊಡಬೇಕೆಂದು ತಮ್ಮ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಇವತ್ತು ದೊಡ್ಡಬಳ್ಳಾಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಶೇಕಡ 60% ಕಾಮಗಾರಿಯು ಮುಗಿದ ನಂತರ ಅಲ್ಲಿಗೆ ಬೇಕಾಗಿರುವ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಡುತ್ತೇವೆಂದು ತಮ್ಮ ಮೂಲಕ ಸದಸ್ಯರಿಗೆ ಮಾತನ್ನು ಕೊಟ್ಟಿದ್ದೇವೆ. ಆದಷ್ಟು ಬೇಗನೆ ಅವರು ಆ ಭಾಗದ ಶಾಸಕರಾಗಿರುವ ಕಾರಣ, ಅಲ್ಲಿರುವಂತಹ ತಹಶೀಲ್ದಾರ್ ಮತ್ತು ಡಿ.ಸಿ.ಯವರು 7 ಎಕರೆ ಜಮೀನನ್ನು ಆದಷ್ಟು ಬೇಗನೆ ನಮಗೆ ಪೂರೈಸಿ ಕೊಟ್ಟಲ್ಲಿ ತಕ್ಷಣವೆ ಅಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡಿ, ಅಲ್ಲಿ ಸಿಬ್ಬಂದಿಗಳ ಕೊರತೆ ಏನು ಇದೆ, ನಾನು ಆದಷ್ಟು ಬೇಗನೆ ಈ ಬಗ್ಗೆ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆಂದು ತಮ್ಮ ಮೂಲಕ ಅವರಿಗೆ ತಿಳಿಸುತ್ತೇನೆ.

ಶ್ರೀ ಜೆ. ನರಸಿಂಹಸ್ವಾಮಿ : ನಾವು ತಹಶೀಲ್ದಾರ್‌ರವರಿಗೆ ಹೇಳುತ್ತೀವಿ. ಈಗ ತಾವು ಶ್ರೀನಿವಾಸಪುರ ಹಾಗೂ ಬಂಗಾರಪೇಟೆಗೆ ಸಿಬ್ಬಂದಿಯನ್ನು 2 ವರ್ಷದ ಹಿಂದೆಯೇ ಒದಗಿಸಿದ್ದೀರಿ, ನಮ್ಮ ಆಸ್ಪತ್ರೆಗೆ ವೈದ್ಯರು ಮತ್ತು ಸಿಬ್ಬಂದಿಯನ್ನು ಒದಗಿಸಿಕೊಡಿ, ಔಷಧಿಯನ್ನು ಕೊಡಿ, ನಾನು ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ ಹೇಳಿ ಆ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಅದಕ್ಕೆ ನಾನು ವ್ಯವಸ್ಥೆಯನ್ನು ಮಾಡಿಕೊಡುತ್ತೇನೆ.

ಅಧ್ಯಕ್ಷರು : ಆಯಿತು. ಶ್ರೀ ಪುಟ್ಟರಾಜು ಸಿ.ಎಸ್.ರವರು ಸದನದಲ್ಲಿ ಇಲ್ಲ. ಶ್ರೀ ಎಂ.ಟಿ. ಕೃಷ್ಣಪ್ಪರವರು ಸದನದಲ್ಲಿಲ್ಲ. ಶ್ರೀ ವಸಂತ ಬಂಗೇರಾರವರ ಪ್ರಶ್ನೆಯ ಬಗ್ಗೆ ಮಾನ್ಯ ಸಚಿವರು ಸಮಯವನ್ನು ಕೇಳಿದ್ದಾರೆ. ಶ್ರೀ ಬಿ.ಸಿ. ಪಾಟೀಲ್‌ರವರು ಸದನದಲ್ಲಿ ಇಲ್ಲ. ಶ್ರೀ ಹ್ಯಾರೀಸ್ ಎನ್.ಎ. ತಾವು ಪ್ರಶ್ನೆಯನ್ನು ಕೇಳಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪುಟ್ಟರಾಜುರವರು ಸದನಕ್ಕೆ ಹಾಜರಾಗಿ ಪ್ರಶ್ನೆಯನ್ನು ಕೇಳಿದರು)